ದಿನಾಂಕಃ **29/01/2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.
ಮುಂದುವರೆದ ಪಾಟೀ ಸವಾಲುಃ ಎದುರುದಾರರ ಪರವಾಗಿ ಶ್ರೀ ಹೆಚ್ ಪಿ ಎಸ್ ವಕೀಲರಿಂದಃ

4. ನಿಪಿ-4 ಮತ್ತು 5 ರ ದಾಖಲಾತಿಗಳು ನನ್ನ ಹೆಂಡತಿ ಜೀವಂತ ಇದ್ದ ಕಾಲದಲ್ಲಿ ಪಡೆದಿರುವ ದಾಖಲಾತಿಗಳು ಆಗಿರುತ್ತವೆ. ನಿಪಿ-4 ಮತ್ತು 5 ರ ರಶೀದಿಗಳು ನನ್ನ ಹೆಂಡತಿ ಶಾಲೆಗೆ ಹಣ ಪಾವತಿಸಿದ ರಶೀದಿಗಳಾಗಿರುತ್ತವೆ ಎಂದರೆ ಸರಿಯಲ್ಲ. ಈಗ ತೋರಿಸಲಾದ Marriage certificate ನನಗೆ ಸಂಬಂಧಿಸಿದಾಗಿರುತ್ತಾರೆ ಎಂದು ಸಾಕ್ಷಿದಾರರು ಒಪ್ಪಿದ್ದು ಹಾಗೂ ಅದರಲ್ಲಿರುವ ತನ್ನ ಸಹಿಯನ್ನು ಸಹ ಒಪ್ಪಿದ್ದು ಹಾಗೂ ಅದು ಸದರಿ ದಾಖಲಾತಿ ಜೆರಾಕ್ಸ ಪ್ರತಿಯಾಗಿದ್ದು ಸಾಕ್ಷಿದಾರರು ಸದರಿ ದಾಖಲಾತಿಯನ್ನು ಒಪ್ಪಿದ್ದರಿಂದ ನಿ.ಆರ್.4 ಎಂದು ಗುರುತಿಸಲಾಯಿತು. ಸದರಿ marriage certificate ನಾನು ಹಾಗೂ ನನ್ನ ಈಗಿನ ಹೆಂಡತಿ ತಬುಸುಮ್ ಬಾನು ರವರಿಗೆ ಸಂಬಂಧಿಸಿರುತ್ತದೆ ಎಂದರೆ ಸರಿ. ಈಗ ತೋರಿಸಲಾದ ನನ್ನ ಹಾಗೂ ತಬುಸುಮ್ ಬಾನು ರವರ ಪೋಟೋದ ಜೆರಾಕ್ಸ ಪ್ರತಿಯಾಗಿರುತ್ತದೆ ಎಂದು ಸಾಕ್ಷಿದಾರರು ಒಪ್ಪಿರುವುದರಿಂದ ಅದನ್ನು ನಿ.ಆರ್.5 ಎಂದು ಗುರುತಿಸಲಾಯಿತು. ನಾನು ತಬುಸುಮ್ ಬಾನು ರವರೊಂದಿಗೆ ದಿಃ 15-05-2025 ರಂದು ವಿವಾಹ ಆಗಿರುತ್ತೇನೆ ಎಂದರೆ ಸರಿ.

5. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನಾನು ಬೇರೆ ವಿವಾಹ ಆಗಲು ಸಿದ್ದನಿರುವುದಿಲ್ಲ ಎಂದು ಬರೆಸಿರುತ್ತೇನೆ ಎಂದರೆ ಸರಿ. ಈ ಅರ್ಜಿ ಸಲ್ಲಿಸುವ ಮೊದಲಿನಿಂದಲೂ ನನಗೆ ತಬುಸುಮ್ ಬಾನು ರವರೊಡನೆ ಸಂಬಂಧ ಇತ್ತು ಎಂದರೆ ಸರಿಯಲ್ಲ. ನನ್ನ ಹಾಗೂ ತಬುಸುಮ್ ಬಾನು ರವರ ವಿವಾಹದ ಮಾತುಕತೆ ವಿವಾಹದ 2 ತಿಂಗಳ ಮುಂಚೆ ಆಗಿತ್ತು. ಈ ಪ್ರಕರಣದಲ್ಲಿ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಲ್ಲಿಸುವ ವೇಳೆಗಿಂತ ಮೊದಲೇ ನನ್ನ ಹಾಗೂ ತಬುಸುಮ್ ಬಾನು ರವರ ವಿವಾಹದ ಮಾತುಕತೆ ಆಗಿತ್ತು ಎಂದರೆ ಸರಿಯಲ್ಲ. ನಾನು ತಬುಸುಮ್ ಬಾನು ರವರಿಗೆ ಮೊದಲನೇ ವಿವಾಹದಿಂದ ಮಗು ಇರುವ ಬಗ್ಗೆ ತಿಳಿಸಿರುತ್ತೇನೆ. ತಬುಸುಮ್ ಬಾನು ರವರು ನನ್ನ ಮೊದಲನೇ ವಿವಾಹದಿಂದ ಆಗಿರುವ ಮಗುವನ್ನು ತನ್ನ ಮಗುವಂತೆ

ನೋಡಿಕೊಳ್ಳುತ್ತೇನೆ ಎಂದು ನನಗೆ ತಬುಸುಮ್ ಬಾನು ರವರು ತಿಳಿಸಿರುತ್ತಾರೆ. ಈ ಕುರಿತು ತಬುಸುಮ್ ಬಾನು ರವರ ವಿಚಾರಣೆಯನ್ನು ಮಾಡಿಸಲು ತೊಂದರೆ ಇಲ್ಲ. 2024-25 ನೇ ಸಾಲಿನಲ್ಲಿ ನನ್ನ ಮಗ ಸೈಯದ್ ಫೈಜಾನ್ ಹಳ್ಳಿಮೈಸೂರು, ಅನುಗ್ರಹ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ವಿಷಯ ಗೊತ್ತಾಗಿರುತ್ತದೆ.

6. ಈ ಪ್ರಕರಣದಲ್ಲಿ ಎದುರುದಾರರು ಸಲ್ಲಿಸಿರುವ ತಕರಾರನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ಆ ತಕರಾರಿನಲ್ಲಿ ಸೈಯದ್ ಫೈಜಾನ್ ಹಳ್ಳಿಮೈಸೂರು, ಅನುಗ್ರಹ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ವಿಷಯವನ್ನು ಹೇಳಿ ಬರೆಸಿರುತ್ತಾರೆ ಎಂದರೆ ಸರಿ. ನನ್ನ ಮಗನ ವಿದ್ಯಾಭ್ಯಾಸದ ಶುಲ್ಕವನ್ನು ಪಾವತಿಸಲು ನಾನು ಹೋಗಿದ್ದು ಶಾಲಾ ಪ್ರಿನ್ಸಿಪಾಲರು ನನಗೆ ಶುಲ್ಕ ಪಾವತಿಸಲು ಅವಕಾಶ ನೀಡಲಿಲ್ಲ. ನಾನು ಡಿಸೆಂಬರ್ - 2025 ರಲ್ಲಿ ಆ ರೀತಿ ವಿದ್ಯಾಭ್ಯಾಸದ ಶುಲ್ಕವನ್ನು ಪಾವತಿಸಲು ಮಗನ ಶಾಲೆಗೆ ಹೋಗಿದ್ದೆ. ನಾನು ಡಿಸೆಂಬರ್ -2025 ರಲ್ಲಿ ಶುಲ್ಕ ಪಾವತಿ ಮಾಡಲು ನನಗೆ ಪ್ರಿನ್ಸಿಪಾಲರು ಅವಕಾಶ ನೀಡದೇ ಇರುವ ಕುರಿತು ಸಂಬಂಧಪಟ್ಟ ಪೊಲೀಸರಿಗೆ ದೂರು ನೀಡಿರುವುದಿಲ್ಲ. ದಿಃ 26-03-2025 ರಂದು ಎದುರುದಾರರು ತಕರಾರು ಸಲ್ಲಿಸಿದ ವೇಳೆಗೆ ನನ್ನ ಮಗ ಎಲ್ಲಿ ವಿದ್ಯಾಭ್ಯಾಸ ಮಾಡುತಿದ್ದಾನೆ ಎಂಬ ವಿಷಯ ಗೊತ್ತಾಯಿತು ಎಂದರೆ ಸರಿ. ನಾನು ಮಾರ್ಚ್ - 2025 ರಿಂದ ಡಿಸೆಂಬರ್ - 2025 ರವರೆಗೆ ನನ್ನ ಮಗನನ್ನು ಭೇಟಿ ಮಾಡಲು ಹಳ್ಳಿ ಮೈಸೂರಿನ ಶಾಲೆಗೆ ಹಲವಾರು ಬಾರಿ ಭೇಟಿ ನೀಡಿರುತ್ತೇನೆ. ಆ ಕುರಿತು ನಾನು ಸಂಬಂಧಪಟ್ಟ B.E.O ಕಚೇರಿಗೆ ಭೇಟಿ ನೀಡಿದ್ದೆ ಅವರು ಪ್ರಕರಣ ನ್ಯಾಯಾಲಯದಲ್ಲಿ ಇರುವುದರಿಂದ ನ್ಯಾಯಾಲಯದಲ್ಲಿಯೇ ಬಗೆಹರಿಸಿಕೊಳ್ಳಿ ಎಂದು ನನಗೆ ತಿಳಿಸಿರುತ್ತಾರೆ. ಇಲ್ಲಿಯವರೆಗೆ ನನ್ನ ಮಗನ ವಿದ್ಯಾಭ್ಯಾಸ ಹಾಗೂ ಆತನ ಜೀವನಾಂಶ ಕುರಿತು ನನ್ನ ಮಗನಿಗೆ ಯಾವುದೇ ವ್ಯವಸ್ಥೆಯನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಇಲ್ಲಿಯವರೆಗೂ ನನ್ನ ಮಗನನ್ನು 1 ಮತ್ತು 2ನೇ ಎದುರುದಾರರೇ ಆತನ ಯೋಗಕ್ಷೇಮಗಳನ್ನು ನೋಡಿಕೊಳ್ಳುತಿದ್ದಾರೆ ಎಂದರೆ ಸರಿಯಲ್ಲ. 1 ಮತ್ತು 2ನೇ ಎದುರುದಾರರು ಹಾಗೂ ನನ್ನ ಮಗ ನನ್ನ ವಿರುದ್ಧ ಪೊಲೀಸರು ದಾಖಲಿಸಿರುವ ಕ್ರಿಮಿನಲ್ ಪ್ರಕರಣದಲ್ಲಿ ಸಾಕ್ಷಿದಾರರಾಗಿರುವುದರಿಂದ

ನನ್ನ ಪರವಾಗಿ ಸಾಕ್ಷಿ ನುಡಿಯುವಂತೆ ಮಾಡಲು ಈ ಅರ್ಜಿಯನ್ನು ಎದುರುದಾರರ ವಿರುದ್ಧ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇದೆ.

ಸಹಿ/-

(ನಾಗೇಶ ಮೂರ್ತಿ ಬಿ.ಕೆ)

ಸೀನಿಯರ್ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,

ಅರಕಲಗೂಡು